ಶ್ರೀ ಬಿ. ಎಂ. ಹೊರಕೇರಿ.—ಇಲ್ಲಿ ನನ್ನ ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಕೃಷಿ ಸೇವಾ ಕೇಂದ್ರಗಳನ್ನು ಪ್ರಾರಂಭಿಸುವುದಕ್ಕೆ ತರಬೇತಿ ನೀಡಲಾಗಿದೆ ಎಂದು ಹೇಳಿದ್ದೀರಿ. ಇಂತಹವರ ಪೈಕಿ ಎಷ್ಟು ಜನರಿಗೆ ಇಲ್ಲಿಯವರೆಗೆ ಕೃಷಿ ಸೇವಾ ಕೇಂದ್ರಗಳನ್ನು ಪ್ರಾರಂಭ ಮಾಡಲು ನೆರವು ನೀಡಲಾಗಿದೆ ?

ಶ್ರೀ ಎನ್. ಚಿಕ್ಕೇಗೌಡ —ಕೃಷಿ ಸೇವಾ ಕೇಂದ್ರಗಳನ್ನು ತೆರೆಯಲು ೧೯ ಜನರಿಗೆ ಕಮರ್ಷಿಯಲ್ ಬ್ಯಾಂಕುಗಳ ಮೂಲಕ ಸಾಲ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ. ಎಂ. ಹೊರಕೇರಿ.—ನನ್ನ ಎರಡನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ನೀರಾವರಿ ಹಾಗೂ ಭೂಸಾರ ಸಂರಕ್ಷಣ ಇಲಾಖೆಯಬಗ್ಗೆ ಭೂಸಾರ ಸಂರಕ್ಷಣ ಕೇಂದ್ರಕ್ಕೆ ವ್ಯವಸಾಯ ಇಂಜಿನಿಯರಿಂಗ್ ಸಂಸ್ಥೆಯ ಈ ಡಿಪ್ಲೋಮಾದಾರರನ್ನು ನೇಮಿಸುವುದಕ್ಕೆ ದರ್ಜೆ ಹಾಗೂ ನೇಮಕಾತಿಗಳಲ್ಲಿ ಅವಕಾಶವನ್ನು ಕಲ್ಪಿಸಿಲ್ಲವೆಂದು ಹೇಳಿದ್ದೀರಿ. ಆದರೆ ಮಹಾರಾಷ್ಟ್ರದಲ್ಲಿ ಇದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿರುವಾಗ ಇಲ್ಲಿಯೂ ಏತಕ್ಕೆ ಮಾಡಬಾರದು ?

ಶ್ರೀ ಎನ್. ಚಿಕ್ಕೇಗೌಡ.— ಈ ಬಗ್ಗೆ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡತಕ್ಕಂಥ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ವೇತನ ಶ್ರೇಣಿಯಲ್ಲಿ ಅಂತರವಿರುವುದರಿಂದ ಮೊದಲು ಅದನ್ನು ಪರಿಹಾರ ಮಾಡಿ ನಂತರ ಈ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ತಿದ್ದುಪಡಿ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ. —ವ್ಯವಸಾಯ ಇಂಜಿನಿಯರಿಂಗ್ ಸಂಸ್ಥೆಯಲ್ಲಿ ತರಬೇತಿ ಪಡೆದವರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಇತರೆಯರನ್ನು ನೇಮಕ ಮಾಡಿಕೊಳ್ಳಲು ಕಾರಣವೇನು ? ವ್ಯವಸಾಯ ಇಂಜನಿಯರಿಂಗ್‌ನಲ್ಲಿ ತರಬೇತಿ ಕೊಡುವಾಗ ಈಗಿರತಕ್ಕಂಥ ಸಿಲಬಸ್‌ನ್ನು ಬದಲಾವಣೆ ಮಾಡಿಯಾದರೂ ಇಲ್ಲಿ ತರಬೇತಿ ಪಡೆದವರಿಗೆ ಕೆಲಸ ಕೊಡಲು ಪಿರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ —ವ್ಯವಸಾಯ ಇಂಜಿನಿಯರಿಂಗ್ ಸ್ಕೂಲ್‌ಗಳಲ್ಲಿ ಈಗ ಇರತಕ್ಕಂಥ ಸಿಲಬಸ್ ಪ್ರಕಾರ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಇರತಕ್ಕಂಥ ಉಪಕರಣಗಳನ್ನು, ಯಂತ್ರಗಳನ್ನು ರಿಪೇರಿ ಮಾಡುವುದನ್ನು ಮತ್ತು ಅವುಗಳನ್ನು ಯಾವ ರೀತಿ ಉಪಯೋಗ ಮಾಡುವುದು ಎಂಬುದನ್ನು ಹೇಳಿಕೊಡಲಾಗುತ್ತದೆ. ತರಬೇತಿ ಮುಂಗಿದ ನಂತರ ಅವರ ಸ್ವಂತ ಜಮೀನಿನಲ್ಲಿ ಕೆಲಸ ಮಾಡಲು ಹೊಗುತ್ತಾರೆ. ಅದಕಾರಣ ಇದಕ್ಕನುಗುಣವಾಗಿ ಸಿಲಬಸ್‌ನ್ನು ಪ್ರಿಸಕ್ರೈಬ್ ಮಾಡಲಾಗಿದೆ. ಇನ್ನು ಮುಂದೆ ನಮ್ಮ ವ್ಯವಸಾಯ ಇಲಾಖೆಗೆ ಇವರುಗಳನ್ನು ಸಾಧ್ಯವಾದಷ್ಟುಮಟ್ಟಿಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಶರಣಪ್ಪ.—ಈ ಕೃಷಿ ಇಲಾಖೆಯಲ್ಲಿ ಡಿಪ್ಲೋಮಾ ಪಡೆದವರಿಗೆ ನೌಕರಿ ಪಡೆಯಲಿಕ್ಕೆ ಸಾಕಷ್ಟು ಅವಕಾಶವಿಲ್ಲ. ಇನ್ನು ಮುಂದೆ ಬೇರೆ ಇಲಾಖೆಗಳಲ್ಲಿ ಕ್ವಾಲಿಫೈಡ್ ಆದ ಡಿಪ್ಲೋಮಾ ಹೋಲ್ಡರ್ಸ್ ಬೇಕು ಎಂದು ಅರ್ಜಿಗಳನ್ನು ಕರೆದಾಗ ಇವರುಗಳೂ ಸಹ ಅರ್ಜಿ ಹಾಕಿಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸುತ್ತೇವೆ.

Construction of K.S.R.T.C. Bus Stand at Sulebhavi and Guledgud

311 Sri B. M. HORAKERI (Guledgud).—Will the Minister for Transport and Tourism be pleased to state.—

(*a*) whether it is not a fact that the family of Nanjayyanamath of Sulebhavi have donated about one acre of land to the KSRTC in memory of late Sri G. P. Nanjayyanamath, M.L.A., for construction of a bus stand at Sulebhavi ;

(*b*) whether the Government is aware of the inconvenience caused to the public of Sulebhavi village due to the absence of a bus stand;

(*c*) whether plans and estimates of the bus stand at Sulebhavi have been prepared ;

(*d*) if so, when construction will be started ;

(*e*) whether the construction of bus stand at Guledgud has progressed and the present temporary shed has been repaired ?

SRI M. MOHAMMED ALI (Minister for Transport and Tourism).—

(*a*) The family of late Sri Nanjayyanamath have offered an area of 29 guntas of land for a bus stand at Sulebhavi.

(*b*) Yes.

(*c*) No.

(*d*) Does not arise in view of reply to clause (*c*).

(*e*) The construction of a permanent bus stand at Guledgud has not been taken up. Tomporary shed has been repaired.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ ಸೂಲೆಬಾವಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದಕ್ಕಾಗಿ ಪ್ಲಾನು ಮತ್ತು ಅಂದಾಜನ್ನು ತಯಾರಿಸಲಾಗಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಅಲ್ಲಿ ಮಳೆಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ಪ್ರಯಾಣಿಕರು ನಿಂತುಕೊಳ್ಳುವುದಕ್ಕೆ ರಕ್ಷಣೆ ಇಲ್ಲದೆ ಬಹಳ ತೊಂದರೆಯಾಗಿದೆ, ಆದಕಾರಣ ಅಲ್ಲಿ ತಾತ್ಕಾಲಿಕವಾಗಿ ಒಂದು ಷೆಡ್ ಹಾಕಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

† SRI M. MOHAMMED ALI.—That has got to be done. It depends on the funds that will be available to the corporation. While sanctioning a bus station the factors like traffic, climate, question of nationalisation, etc., are kept in view and as and when funds become available this will be taken up.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ಗುಳೇದ ಗುಡ್ಡದಲ್ಲಿ ಖಾಯಂ ಬಸ್‌ನಿಲ್ದಾಣವನ್ನು ಕಟ್ಟಿಸುವ ಸಲುವಾಗಿ ಆ ಪ್ರದೇಶದ ಜನರು ಕೆಲವರು ಉಪವಾಸ ಸತ್ಯಾಗ್ರಹವನ್ನು ಕೈಗೊಂಡದ್ದು ತಮ್ಮ ಲಕ್ಷ್ಯಕ್ಕೆ ಬಂದಿದೆಯೇ ?

SRI M. MOHAMMED ALI.—As far as Guledgud is concerned, the corporation has appointed a committee to select places where bus stations can be constructed. From the list that has been given to me I find that work of bus station at Guledgud will be taken up this year.

ಶ್ರೀ ಜೆ. ಎಲ್. ಕಬಾಡಿ.—ಬಸ್‌ಸ್ಟ್ಯಾಂಡ್ ಕಟ್ಟುವ ವಿಷಯದಲ್ಲಿ ಕೆ. ಎಸ್. ಆರ್. ಟಿ. ಸಿ. ಯಲ್ಲಿ ಫೂಡ್ ಅಮೈಲಬಲ್ ಆದರೆ ಬಸ್‌ಸ್ಟ್ಯಾಂಡ್ ಕಟ್ಟಿಸುತ್ತೇನೆ ಎಂದು ಕಾಮನ್ ಸ್ಲೋಗನ್ನು ಅನ್ನು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಗುಳೇದಗುಡ್ಡದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಿಸಲು ಮುಖ್ಯ ಮಂತ್ರಿಗಳು ಆಡಿಗಲ್ಲು ಹಾಕಿದ್ದಾರೆ. ಆದರೆ ಅದು ಸೆಲೆಕ್ಷನ್ ಕಮಿಟಿಯ ತೀರ್ಮಾನದ ಮೇಲೆ ಹೋಗುತ್ತದೆಂದು ಹೇಳಿದ್ದಾರೆ. ಅದಕ್ಕೆ ತಾವು ಏನು ಹೇಳುತ್ತೀರಿ ?

SRI M. MOHAMMED ALI.—This is also under the consideration of the committee. Wherever foundation stones have been laid, preference is given for selecting such places. I do not think there will be much delay to start the work where foundations have been laid.